ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿಆರ್‌ಎಂ ಆರೋಪಿ ಪರ ವಕೀಲರಿಂದಃ

ಆರೋಪಿ ನನಗೆ 2000 ದ ಸಾಲಿನಿಂದ ಪರಿಚಯವಿದ್ದಾರೆ. 1982 ರಲ್ಲಿ ನಾನು ಗ್ಯಾಸ್ ಕಂಪನಿ ಮಾಡಿದ್ದೇನೆ. ಆರೋಪಿ 2001 ರಿಂದ ಗ್ಯಾಸ್ ಕಂಪನಿ ಪ್ರಾರಂಭಿಸಿದ್ದಾರೆ. ನನ್ನ ಗ್ಯಾಸ್ ಕಂಪನಿ ನೊಂದಣಿಯಾಗಿದ್ದು ಅದರ ನೊಂದಣಿ ಸಂಖ್ಯೆ ಗೊತ್ತಿಲ್ಲ. ನನ್ನ ಗ್ಯಾಸ್ ಕಂಪನಿ ನೊಂದಣಿಯಾಗಿಲ್ಲದಿದ್ದರೂ ಸಂಖ್ಯೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಗ್ಯಾಸ್ ಸರಬರಾಜಿಗೆ ಅವರದೇ ಮಾಲೀಕತ್ವದ ಲಾರಿ ಇದೆ. ಅವರ ಲಾರಿಯಲ್ಲೂ ನಾನು ಗ್ಯಾಸ್ ತರಿಸುತ್ತಿದ್ದೆ ಎಂದರೆ ಸರಿ. ಸಾಕ್ಷಿ ಸ್ವತಃ ನನ್ನ ಲಾರಿಯನ್ನು ಕೂಡ ಅವರು ಬಳಸುತ್ತಿದ್ದರು. ಹೀಗೆ ಎರಡು ವರ್ಷದಿಂದ ಅವರ ಲಾರಿಯನ್ನು ನಾನು ಬಳಸುತ್ತಿದ್ದೆ. ನನ್ನ ಲಾರಿಯನ್ನು ಆರೋಪಿ ಎಂದೂ ಬಳಸಿಲ್ಲ ಮತ್ತು ನಾನೇ ಆರೋಪಿಯ ಲಾರಿಯನ್ನು ಗ್ಯಾಸ್ ಸರಬರಾಜಿಗೆ ಬಳಸುತ್ತಿದ್ದೆ ಎಂದರೆ ಸರಿಯಲ್ಲ. ದಿಃ 05.11.2008 ರಿಂದ 12.03.2010 ರವರೆಗೆ ನಾನು ಆೆರೋಪಿಯ ಲಾರಿಗೆ ಅಟ್ಯಾಚ್‌ಮೆಂಟ್ ಮಾಡಿಸಿಕೊಂಡು ನಮ್ಮ ಕಂಪನಿಗೆ ಗ್ಯಾಸ್ ಸರಬರಾಜು ಮಾಡಿಕೊಂಡಿದ್ದೇನೆ ಎಂದೆರ ಸರಿ. ದಿಃ 05.11.2008 ರಿಂದ 12.03.2010 ರವರೆಗೆ ಅವರ ಲಾರಿಯನ್ನು ನಾನೇ ಬಳಸಿಕೊಂಡಿರುವ ಕಾರಣ ನಾನೇ ಅವರಿಗೆ ಒಟ್ಟು ರೂ. 14,44,458-00 ಬಾಕಿ ಇದೆ ಎಂದರೆ ಸರಿಯಲ್ಲ. ಆೆರೋಪಿ ಕಳುಹಿಸುತ್ತಿದ್ದ ಲಾರಿಯ ಸಂಖ್ಯೆ ನೆನಪಿಲ್ಲ. ಅದರ ನೊಂದಣಿ ಸಂಖ್ಯೆ ಕೆಎ 18 ಎ 3114 ಎಂದರೆ ನೆನಪಿಲ್ಲ.

ದಿಃ 01.10.2014 ರ ನಾಲ್ಕು ದಿನಗಳ ಮೊದಲು ಆರೋಪಿ ನನ್ನಿಂದ ಹಣ ರೂ. 15,00,000-00 ಕೇಳಿದ್ದ. ಅದಕ್ಕೆ ನಾನು ದಿಃ 01.10.2014 ರಂದು 9 ಲಕ್ಷ ಹಣ ನೀಡಿದ್ದೆ. 09.10.2014 ರಂದು ನಾನು 6 ಲಕ್ಷ ಕೊಟ್ಟಿದ್ದೇನೆ. ಆರೋಪಿ ನನಗೆ ಸದ್ಯದಲ್ಲೇ ಹಣ ಹಿಂತಿರುಗಿಸುವುದಾಗಿ ಹೇಳಿದ್ದ, ನಿಖರವಾದ ದಿನಾಂಕ ಹೇಳಿಲ್ಲ. ನಾನು ಆರೋಪಿಗೆ ದಿಃ 01.10.2014 ರಂದು 9 ಲಕ್ಷ ಹಣ

ನೀಡಿಲ್ಲ ಎಂದರೆ ಸರಿಯಲ್ಲ, ಅದೇ ರೀತಿ 09.10.2014 ರಂದು ನಾನು 6 ಲಕ್ಷ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ನೋಟೀಸ್‌ನಲ್ಲಿ ದಿ: 01.10.2014 ಕ್ಕೆ 9 ಲಕ್ಷ ಮತ್ತು ದಿ: 09.10.2014 ರಂದು 6 ಲಕ್ಷ ನೀಡಿದ್ದೇನೆ ಎಂದು ಹೇಳಿದ್ದೆನೆ. ನಾನು ನನ್ನ ನೋಟೀಸ್‌ನಲ್ಲಿ ದಿ: 11.01.2014 ರಂದು 9 ಲಕ್ಷ ನೀಡಿದ್ದೇನೆ ಅದೇ ರೀತಿ ದಿ: 09.01.2014 ರಂದು 6 ಲಕ್ಷ ನೀಡಿದ್ದೇನೆ ಎಂದು ಹೇಳಿದ್ದೆನೆ ಎಂದರೆ ಸರಿಯಲ್ಲ, ಸಾಕ್ಷಿಗೆ ಸದರಿ ನೋಟೀಸ್‌ನ್ನು ತೋರಿಸಲಾಗಿ ದಿ: 09.01.2014 ರಂದು 6 ಲಕ್ಷ, ದಿ: 11.01.2014 ರಂದು 9 ಲಕ್ಷ ನೀಡಿದ್ದೇನೆ ಎಂದು ನಮೂದು ಇದೆ ಎಂದು ಒಪ್ಪಿರುತ್ತಾರೆ. ನೋಟೀಸ್ ಕೊಟ್ಟಾದ ಮೇಲೆ ಆರೋಪಿಯನ್ನು ಸ್ವತಃ ಭೇಟಿಯಾಗಿದ್ದೇನೆ, ದಿನಾಂಕ ನೆನಪಿಲ್ಲ. ನಾನು ಕೊಟ್ಟ ನೋಟೀಸ್ ಆರೋಪಿಗೆ ಖುದ್ದಾಗಿ ಜಾರಿಯಾಗಿಲ್ಲ, ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಕ್ರಮಸಂಖ್ಯೆ 14 ರಲ್ಲಿ ಗೀತಾ ಎನ್ನುವವರಿಗೆ ನೋಟೀಸ್ ಖುದ್ದಾಗಿ ಜಾರಿಯಾಗಿದೆ ಎಂದರೆ ಸರಿ. ಅದು ಅವರ ಸ್ಟಾಫ್‌ಗೆ ಜಾರಿಯಾಗಿದೆ. ಸದರಿ ನೋಟೀಸ್ ಆರೋಪಿಗೆ ಖುದ್ದಾಗಿ ನೋಟೀಸ್ ಜಾರಿಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ, ಆರೋಪಿಗೆ 9 ಲಕ್ಷ ಮತ್ತು 6 ಲಕ್ಷ ನೀಡಿರುವ ಚೆಕ್‌ಗಳ ಸಂಖ್ಯೆ ನೆನಪಿಲ್ಲ, ರೂ. 50,000-00 ಮೇಲಿನ ಹಣವನ್ನು ಅಕೌಂಟ್ ಪೇಯಿ ಚೆಕ್ ಮೂಲಕ ಮಾತ್ರ ನೀಡಲು ಕಾನೂನು ಇದೆ ಎಂದರೆ ನನಗೆ ಈಗಿನ ಕಾನೂನು ಗೊತ್ತಿಲ್ಲ, ಆಗ ಕೊಡಬಹುದಿತ್ತು, ಮೊದಲಿನಿಂದಲೂ 50,000-00 ಕ್ಕಿಂತಲೂ ಹೆಚ್ಚಿನ ಮೊತ್ತದ ಚೆಕ್‌ಗೆ ಬ್ಯಾಂಕ್‌ನವರು ಕೂಡ ಅಕೌಂಟ್‌ಗೆ ಹಾಕಿಯೇ ಕೊಡುತ್ತಿದ್ದರು ಹಾಗೆಯೇ ದುಡ್ಡು ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ, ಆರೋಪಿಗೆ ಕೊಟ್ಟ ಚೆಕ್ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನನ್ನ ಖಾತೆಯಿಂದಲೇ ಡ್ರಾ ಆಗಿದೆ. ನಾನು ಆರೋಪಿಗೆ 9 ಲಕ್ಷಕ್ಕಾಗಲೀ, 6 ಲಕ್ಷಕ್ಕಾಗಲೀ ಚೆಕ್ ಕೊಟ್ಟಿಲ್ಲ ಅದು ಕ್ರಾಸ್ ಮಾಡದೇ ಚೆಕ್‌ನ ಹಣವೂ ಪಾವತಿಯಾಗುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ತನ್ನ ವ್ಯವಹಾರಕ್ಕಾಗಿ ರೂ. 15,00,000-00 ಹಣ ವನ್ನು ಕೇಳಿರುತ್ತಾರೆ. ಅವರು ಗ್ರಾನೆಟ್ ಮತ್ತು ಗ್ಯಾಸ್ ವ್ಯವಹಾರ ಮಾಡುತ್ತಾರೆ. ಆರೋಪಿ ನನ್ನಿಂದ ವ್ಯವಹಾರಕ್ಕಾಗಿ ರೂ. 15

ಲಕ್ಷವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವ ದಿನಾಂಕದ ಚೆಕ್ ಕೊಟ್ಟರು ಎಂದು ಗೊತ್ತಿಲ್ಲ, ಆಗ ಬ್ಯಾಂಕ್‌ನವರು ಚೆಕ್‌ನ ಸಹಿಯಲ್ಲಿ ವ್ಯತ್ಯಾಸ ಇದೆ ಮತ್ತು ಅಕೌಂಟ್‌ನಲ್ಲಿ ಹಣ ಇಲ್ಲ ಎಂಬ ಕಾರಣಕ್ಕೆ ಬ್ಯಾಂಕ್‌ನವರು ಅಮಾನ್ಯ ಮಾಡಿರುತ್ತಾರೆ. ನಿಪಿ-2 ರಲ್ಲಿ **ಡ್ರಾಯರ್ಸ್ ಸಿಗ್ನೇಚರ್ ಡಿಫರ್ಸ್** ಎನ್ನುವ ನಮೂದು ಮಾತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ದಾಖಲಾತಿ ನೊಡೀ **ಸಿಗ್ನೇಚರ್ ಡಿಫರ್ಸ್** ಎಂದು ಇದೆ ಎಂದು ಒಪ್ಪಿರುತ್ತಾರೆ.

(ಮುಂದುವರಿದ ಪಾಟೀ ಸವಾಲು ಮಾಡಲು ಸಮಯ ನೀಡಲಾಯ್ತು.)

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಒ

(ನಾಗಜ್ಯೋತಿ ಕೆ ಎ)
ಜೆಎಂಎಫ್‌ಸಿ, ಬೇಲೂರು.